ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 13/12/19

# ಜಾತಿ ಗಣತಿಗೆ ಇತಿಶ್ರೀ

## ₹158 ಕೋಟಿ ವೆಚ್ಚದ ವರದಿ ಅವೈಜ್ಞಾನಿಕ । ಸರ್ಕಾರ ಷರಾ

ವಿ.ವಾ. 13/12/19

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರಾಜಕೀಯ ವಲಯದಲ್ಲಿ ಸಂಚಲನಕ್ಕೆ ಕಾರಣವಾಗಿದ್ದ ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿರುವ ಸಾಮಾಜಿಕ, ಆರ್ಥಿಕ ಸಮೀಕ್ಷೆಯನ್ನು ಒಪ್ಪದಿರಲು ಸರ್ಕಾರ ನಿರ್ಧರಿಸಿದೆ. ಗುರುವಾರ ನಡೆದ ಸಂಪುಟ ಸಭೆಯಲ್ಲಿ ಈ ಸಮೀಕ್ಷೆ ಕುರಿತಂತೆ ಒಂದು ವಿಷಯವಿತ್ತಾದರೂ ಅದನ್ನು ಚರ್ಚೆಗೂ ತೆಗೆದುಕೊಳ್ಳದೆ ಸರ್ಕಾರ ತನ್ನ ನಿಲುವನ್ನು ಸ್ಪಷ್ಟಮಾಡಿಕೊಂಡಿತು.

ರಾಜ್ಯದ ಜಾತಿ ವ್ಯವಸ್ಥೆ, ಅವರ ಆರ್ಥಿಕ ಪರಿಸ್ಥಿತಿ ಬಗ್ಗೆ ಸ್ಪಷ್ಟತೆ, ನಿಖರ ಅಂಕಿ-ಅಂಶಗಳಿಲ್ಲದ ಕಾರಣಕ್ಕೆ ಈ ವರದಿ ಅವೈಜ್ಞಾನಿಕವಾಗಿ ಸಿದ್ಧವಾಗಿದೆ ಎಂಬುದು ಈಗಿನ ಸರ್ಕಾರದ ವಾದವಾಗಿದೆ.

ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಆರ್ಥಿಕ, ಸಾಮಾಜಿಕ ಸಮೀಕ್ಷೆ ನಡೆಸಲು ಹಿಂದುಳಿದ ವರ್ಗಗಳ ಆಯೋಗಕ್ಕೆ ಸೂಚಿಸಿದ್ದರು. 2014ರಲ್ಲಿ ಸಮೀಕ್ಷೆ ನಡೆಸಲು ಆದೇಶಿಸಲಾಗಿತ್ತು. ಮನೆಮನೆ ಗಣತಿ ನಡೆಸಿ, ಜಾತಿ, ಔದ್ಯೋಗಿಕ, ಕೌಟುಂಬಿಕ, ಸ್ಥಿರ- ಚರಾಸ್ತಿ ಸೇರಿ 55 ಅಂಶಗಳ ಬಗ್ಗೆ ಮಾಹಿತಿ ಕಲೆ ಹಾಕಲಾಗಿತ್ತು.

**» ಅಂಕಿಅಂಶ ಬಳಸಿ ಸಕ್ರಮಗೊಳಿಸುವ ಅಧಿಕಾರಿಗಳ ಪ್ರಯತ್ನಕ್ಕೂ ಬ್ರೇಕ್**

ಸಿದ್ದರಾಮಯ್ಯ ಸರ್ಕಾರ ಈ ವರದಿ ಒಪ್ಪಿಕೊಳ್ಳುವುದಕ್ಕೆ ವಿವಿಧ ಅಡೆತಡೆ ಉಂಟಾಯಿತು. ಬಳಿಕ ವಿಧಾನಸಭಾ ಚುನಾವಣೆ, ನಂತರ ಕಾಂಗ್ರೆಸ್ ಪಾಲುದಾರನಾಗಿದ್ದ ಮೈತ್ರಿ ಸರ್ಕಾರ ಕೂಡ ಜಾತಿಗಣತಿಯನ್ನು ಸ್ವೀಕರಿಸುವ ಗೋಜಿಗೆ ಹೋಗಲಿಲ್ಲ. ಎಚ್.ಡಿ.ಕುಮಾರಸ್ವಾಮಿಗೆ ವರದಿ ನೀಡಲು ಆಯೋಗ ಸಿದ್ಧವಿದ್ದರೂ ಅವರ ಭೇಟಿಗೆ ಸಮಯ ಕೊಟ್ಟಿರಲಿಲ್ಲ. ಬಳಿಕ ಹೊಸದಾಗಿ ರಚನೆಯಾದ ಬಿಜೆಪಿ ಸರ್ಕಾರಕ್ಕೆ ವರದಿ ಸಲ್ಲಿಸಲು ಆಯೋಗದ ಅಧ್ಯಕ್ಷರು ಮುಂದಾಗಿದ್ದರು. ಆದರೆ, ಸೆ.22ರಂದು ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರ ಅವಧಿಯನ್ನು ಸರ್ಕಾರ ರದ್ದುಗೊಳಿಸಿತು. ಈ ಮೂಲಕ ವರದಿ ಆಯೋಗದ ಕಾರ್ಯದರ್ಶಿ ಸುಪರ್ದಿಯಲ್ಲೇ ಉಳಿಯಿತು.

ಬರೋಬ್ಬರಿ 158 ಕೋಟಿ ರೂ. ವೆಚ್ಚದ ವರದಿ ಬಹಿರಂಗವಾದರೆ ಪ್ರತಿ ಕ್ಷೇತ್ರದ ಜಾತಿವಾರು ಲೆಕ್ಕಾಚಾರಗಳು ಬಹಿರಂಗವಾಗಲಿದೆ ಮತ್ತು ಈ ಮೂಲಕ ರಾಜಕೀಯ ಲೆಕ್ಕಾಚಾರ, ಪರಿಣಾಮ ಬೇರೆಯಾಗಲಿದೆ ಎಂಬ ಮಾತಿತ್ತು. ಹೀಗಾಗಿ ವರದಿ ಬಹಿರಂಗದ ಬಗ್ಗೆಯೂ ಸಾಕಷ್ಟು ಆಕ್ಷೇಪಗಳಿತ್ತು.

ಜತೆಗೆ ಕಾಟಾಚಾರಕ್ಕೆ ಮನೆಮನೆ ಗಣತಿ ನಡೆದಿದ್ದು, ಹಲವಾರು ಕಡೆ ಗಣತಿದಾರರು ಮನೆಗೆ ಬಂದೇ ಇಲ್ಲ, ಕೆಲವು ಕಡೆ ತಮ್ಮ ಇಚ್ಛಾನುಸಾರ ಮಾಹಿತಿ ತುಂಬಿಕೊಂಡಿದ್ದಾರೆಂಬ ಟೀಕೆಗಳೂ ವ್ಯಕ್ತವಾಗಿತ್ತು. ಆದರೆ, ಪ್ರತಿ ಕುಟುಂಬದ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿ ಪಕ್ವ ವರದಿ ಮಾಡುವುದು ಅಧಿಕಾರಿಗಳ ಲೆಕ್ಕಾಚಾರವಾಗಿತ್ತು. ಇದೀಗ ವರದಿಯಲ್ಲಿರುವ ಅಂಶಗಳನ್ನು ಬಳಸಿಕೊಳ್ಳಲು ಒಪ್ಪಿಗೆ ನೀಡುವಂತೆ ಹಿರಿಯ ಅಧಿಕಾರಿಗಳು ಸಂಪುಟಕ್ಕೆ ಪ್ರಸ್ತಾವನೆ ಇಟ್ಟಿದ್ದರು. ಪುಟ 6



### ಸಿದ್ದು ಆರೋಗ್ಯ ವಿಚಾರಿಸಿದ ಸಿಎಂ ಬಿಎಸ್‌ವೈ

ಆ್ಯಂಜಿಯೋಪ್ಲಾಸ್ಟ್‌ಗೆ ಒಳಗಾಗಿ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾಜಿ ಸಿಎಂ ಸಿದ್ದರಾಮಯ್ಯ ಅವರನ್ನು ಸಿಎಂ ಯಡಿಯೂರಪ್ಪ, ಸಚಿವರಾದ ಬಸವರಾಜ ಬೊಮ್ಮಾಯಿ, ಈಶ್ವರಪ್ಪ ಭೇಟಿಯಾಗಿ ಆರೋಗ್ಯ ವಿಚಾರಿಸಿದರು. ವರದಿ ಪುಟ 9

## ಪ್ರಮುಖ ತೀರ್ಮಾನ

1 ಸಾಲ ಸೌಲಭ್ಯ ಪಡೆದುಕೊಳ್ಳಲು ಆರ್ಯ ವೈಶ್ಯ ಸಮುದಾಯಕ್ಕೆ ಜಾತಿ ಪ್ರಮಾಣಪತ್ರ ನೀಡಲು ಒಪ್ಪಿಗೆ. ಶಿಕ್ಷಣ, ಉದ್ಯೋಗಕ್ಕೆ ಅಗತ್ಯವಾದ ಪ್ರಮಾಣಪತ್ರ ನೀಡುವಂತಾಗಲು ಕ್ರಮಕೈಗೊಳ್ಳುವಂತೆ ಹಿಂದುಳಿದ ವರ್ಗಗಳ ಆಯೋಗಕ್ಕೆ ಸೂಚನೆ

2 ಐಟಿಐ ಅಂತಿಮ ವರ್ಷದ 5331 ಎಸ್ಸಿ, ಎಸ್ಟಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಗೆ 16.98 ಕೋಟಿ ರೂ. ಮತ್ತು ಬ್ಯಾಕ್‌ಲಾಗ್ ಹುದ್ದೆ ತುಂಬುವ ಸಂಬಂಧ ಸಂಪುಟಕ್ಕೆ ಶಿಫಾರಸು ಮಾಡಲು ಕಾರಜೋಳ ನೇತೃತ್ವದಲ್ಲಿ ಸಂಪುಟ ಉಪ ಸಮಿತಿ ರಚನೆ

3 ಚಿಕ್ಕಬಳ್ಳಾಪುರ ಮೆಡಿಕಲ್ ಕಾಲೇಜಿಗೆ 525 ಕೋಟಿ ರೂ., ಪಟ್ಟದಕಲ್ಲಿನಲ್ಲಿ ಆಧುನಿಕ ಸೌಲಭ್ಯ ಹೊಂದಿದ ಪ್ರವಾಸಿ ಪ್ಲಾಜಾ ಮಾಡಲು 29.25 ಕೋಟಿ ರೂ., 10 ಕಡೆ ವಿದ್ಯಾರ್ಥಿನಿಯರ ಕ್ರೀಡಾ ಹಾಸ್ಟೆಲ್ ನಿರ್ಮಾಣಕ್ಕೆ 15 ಕೋಟಿ ರೂ. ಅನುದಾನ

## ಜ.20ರಿಂದ ಅಧಿವೇಶನ...

2020ನೇ ಸಾಲಿನ ಮೊದಲ ವಿಧಾನಮಂಡಲದ ಅಧಿವೇಶನವನ್ನು ಜ. 20ರಿಂದ 30ರವರೆಗೆ ನಡೆಸಲು ಸಂಪುಟ ಸಭೆ ತೀರ್ಮಾನಿಸಿದೆ. ಮೊದಲ ದಿನ ಜಂಟಿ ಅಧಿವೇಶನ ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡಲಿದ್ದಾರೆ. ಬಳಿಕ ಮೇಲ್ಮನೆ ಮತ್ತು ಕೆಳಮನೆಯಲ್ಲಿ ಪ್ರತ್ಯೇಕವಾಗಿ ಕಲಾಪ ನಡೆಯುವುದು. ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ, ಕೆಲವು ಪ್ರಮುಖ ವಿಧೇಯಕಗಳ ಮೇಲೆ ಚರ್ಚೆ ನಡೆಯುವುದು. ನೆರೆ ಕಾರಣಕ್ಕೆ 2019ರ ಚಳಿಗಾಲದ ಅಧಿವೇಶನವನ್ನು ಬೆಳಗಾವಿ ಬದಲು ಬೆಂಗಳೂರಿನಲ್ಲೇ ನಡೆಸಲಾಗಿತ್ತು. ಪುಟ 6

ದಿನಾಂಕ 13/12/2019

# 10 ಕಡೆ ಕ್ರೀಡಾ ಹಾಸ್ಟೆಲ್

## ವಿದ್ಯಾರ್ಥಿನಿಯರಿಗೆ ಪ್ರೋತ್ಸಾಹ ನೀಡಲು ಸರ್ಕಾರದ ತೀರ್ಮಾನ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ವಿದ್ಯಾರ್ಥಿನಿಯರಿಗೆ ಕ್ರೀಡೆಯಲ್ಲಿ ಹೆಚ್ಚಿನ ಪ್ರೋತ್ಸಾಹ ನೀಡುವ ಉದ್ದೇಶದಿಂದ 10 ಜಿಲ್ಲೆಗಳಲ್ಲಿ ಕ್ರೀಡಾ ಹಾಸ್ಟೆಲ್ ಆರಂಭಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಹೊಸ ಕ್ರೀಡಾ ಹಾಸ್ಟೆಲ್‌ಗಳನ್ನು ಆರಂಭಿಸಲು ಗುರುವಾರ ನಡೆದ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಯಿತು.

ರಾಯಚೂರು, ಹಾವೇರಿ, ಮಂಗಳೂರು, ಚಾಮರಾಜನಗರ, ಕಲಬುರಗಿ, ಕೋಲಾರ, ಮಂಡ್ಯ, ಚಿಕ್ಕಮಗಳೂರು, ಹಾಸನ, ಧಾರವಾಡದಲ್ಲಿ ಕ್ರೀಡಾ ವಸತಿ ನಿಲಯವನ್ನು 15 ಕೋಟಿ ರೂ. ವೆಚ್ಚದಲ್ಲಿ ಆರಂಭಿಸಲಾಗುತ್ತದೆ ಎಂದು ಕಾನೂನು ಸಚಿವ ಮಾಧುಸ್ವಾಮಿ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ವಿವರಿಸಿದರು. ವಿದ್ಯಾರ್ಥಿನಿಯರಿಗೆ ಕ್ರೀಡಾ ಕ್ಷೇತ್ರದಲ್ಲಿ ನೆರವಾಗುವ ನಿಟ್ಟಿನಲ್ಲಿ ಪ್ರತ್ಯೇಕ ಹಾಸ್ಟೆಲ್ ಆರಂಭಿಸಲಾಗುತ್ತಿದೆ. ಅಲ್ಲಿ ಕೋಚರ್, ಪೌಷ್ಟಿಕ ಆಹಾರ ಸೇರಿ ಸಕಲ ಸೌಲಭ್ಯ ನೀಡಲಾಗುತ್ತದೆ ಎಂದು ತಿಳಿಸಿದರು.



ಬಾಗಲಕೋಟೆ ಜಿಲ್ಲೆಯಲ್ಲಿರುವ ಪಟ್ಟದಕಲ್ಲನ್ನು ವಿಶ್ವದರ್ಜೆ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು ಸರ್ಕಾರ ನಿರ್ಧರಿಸಿದ್ದು, ಇದಕ್ಕಾಗಿ 29.25 ಕೋಟಿ ರೂ. ವೆಚ್ಚದ ಅಭಿವೃದ್ಧಿ ಪ್ಲಾಜಾ ನಿರ್ಮಿಸಲು ಸಂಪುಟ ಸಹಮತ ವ್ಯಕ್ತಪಡಿಸಿದೆ ಎಂದರು. ಮಲಪ್ರಭಾ ದಂಡೆಯಲ್ಲಿನ 24 ಎಕರೆಯಲ್ಲಿ ರೆಸ್ಟೋರೆಂಟ್, ಸ್ಥಳೀಯ ಕಲಾ ಪ್ರದರ್ಶನಕ್ಕೂ ವೇದಿಕೆ, ಆಂಫಿ ಥಿಯೇಟರ್, ಬಯಲು ರಂಗಮಂದಿರ, ಶೌಚಗೃಹ, ಮಳಿಗೆಗಳು, ವಿಶ್ರಾಂತಿ ಕೊಠಡಿ, ಸಮಾವೇಶ ಕೇಂದ್ರ, ವಾಹನ ನಿಲುಗಡೆ ಪ್ರದೇಶ ಸೇರಿ ವಿವಿಧ ಸೌಲಭ್ಯ ಒದಗಿಸಲಾಗುತ್ತದೆ ಎಂದು ಹೇಳಿದರು.



### ಸೀರೆಗೆ 10 ಕೋಟಿ ರೂ.

ರಾಜ್ಯದ 62,580 ಅಂಗನವಾಡಿ ಹಾಗೂ 3331 ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ಕೈಮಗ್ಗ ಅಭಿವೃದ್ಧಿ ನಿಗಮದಿಂದ ತಲಾ ಎರಡರಂತೆ 2.56 ಲಕ್ಷ ಸೀರೆ ಖರೀದಿಸಿ ವಿತರಿಸಲು 10.75 ಕೋಟಿ ರೂ. ನೀಡಲು ಸಂಪುಟ ಒಪ್ಪಿಗೆ ನೀಡಿದೆ.

### ಪ್ರಮುಖ ತೀರ್ಮಾನಗಳು

- ಧರ್ಮಸ್ಥಳಕ್ಕೆ ಕುಡಿವ ನೀರು ಕೊಡಲು ಮುಳಿಕ್ಕಾರು ಬಳಿ ನೇರಿಯ ನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು ಕಟ್ಟಲು 14.97 ಕೋಟಿ ರೂ.
- ಕಲಬುರಗಿ ಜಿಲ್ಲೆ ಅಫ್ಜಲ್‌ಪುರ ತಾಲೂಕಿನ ಗೋಳನೂರು - ಮೂಗನ ಇಟಗಿ ನಡುವೆ ಭೀಮಾ ನದಿಗೆ ಅಡ್ಡಲಾಗಿ ಬಾಂದಾರ ನಿರ್ಮಿಸಲು 72 ಕೋಟಿ ರೂ.
- ಹೊಸಪೇಟೆಯ ಪಾಪಿನಾಯಕನಹಳ್ಳಿ ಸುತ್ತಲಿನ ಗಣಿಬಾಧಿತ ಗ್ರಾಮಗಳ 18 ಕೆರೆ, 4 ಚೆಕ್‌ಡ್ಯಾಂ ತುಂಬಿ ಕುಡಿವ ನೀರು ನೀಡಲು 243.35 ಕೋಟಿ ರೂ.
- ವಿಜಯಪುರ ಜಿಲ್ಲೆಯ ತಿಕೋಟ, ಕಲಬುರಗಿ ಜಿಲ್ಲೆ ಕಮಲಾಪುರವನ್ನು ಪಟ್ಟಣ ಪಂಚಾಯತಿಯಾಗಿ ಮೇಲ್ದರ್ಜೆಗೆ
- ವಿಶೇಷ ಚೇತನರಿಗೆ 2 ಸಾವಿರ ಯಂತ್ರಚಾಲಿತ ವಾಹನ ನೀಡಲು ₹15 ಕೋಟಿ
- ಭಾಗ್ಯಲಕ್ಷ್ಮೀ ಯೋಜನೆ ಅನುಷ್ಠಾನಕ್ಕಾಗಿ 2020ರ ಮಾ.31ರವರೆಗೆ ಎಲ್‌ಐಸಿ ಜತೆಗಿನ ಒಡಂಬಡಿಕೆ
- ಕೃಷಿ ಗ್ರಾಮೀಣಾ ಬ್ಯಾಂಕ್ ಸಾಲ ನೀಡಿಕೆಗೆ ನಬಾರ್ಡ್ ನೆರವು ಪಡೆಯಲು ಸರ್ಕಾರದಿಂದ 1550 ಕೋಟಿ ರೂ.ಗೆ ಖಾತ್ರಿ
- ಕೌಶಲ ತರಬೇತಿ ನೀಡಲು ಬೇರೆ ಬೇರೆ ಇಲಾಖೆ, ಸಂಸ್ಥೆ ಮೂಲಕ ನೀಡುವ ತರಬೇತಿ ವ್ಯವಸ್ಥೆಯನ್ನು ಕೌಶಲಾಭಿವೃದ್ಧಿ ನಿಗಮದಡಿ ತರಲು ನಿರ್ಧಾರ
- ವಿಜಯಪುರ ಪುನರ್ವಸತಿ ಕೇಂದ್ರಕ್ಕೆ 50 ಕೋಟಿ ರೂ.
- ಲೋಕಾಯುಕ್ತರು ತಮಗೆ ತನಿಖೆ ನಡೆಸಲು ಇಷ್ಟವಿಲ್ಲದ ಪ್ರಕರಣವನ್ನು ಉಪ ಲೋಕಾಯುಕ್ತರಿಗೆ ವರ್ಗಾಯಿಸಲು ಅವಕಾಶ ಮಾಡಿಕೊಡುವ ಅಗತ್ಯ ಕಾನೂನು ತಿದ್ದುಪಡಿಗೆ ಒಪ್ಪಿಗೆ

# ಜಾತಿ ಗಣತಿಗೆ ಸರ್ಕಾರ ಇತಿಶ್ರೀ

ಮೊದಲನೇ ಪುಟದಿಂದ...

ಸರ್ಕಾರದ ಯೋಜನೆ ರೂಪಿಸುವಾಗ ಈ ಮಾಹಿತಿ ಬಳಸಿಕೊಂಡರೆ ಅನುಕೂಲ ಎಂಬುದು ಅಧಿಕಾರಿಗಳ ವಿವರಣೆಯಾಗಿತ್ತು. ಆದರೆ, ಸಂಪುಟ ಈ ಪ್ರಸ್ತಾಪವನ್ನು ಚರ್ಚೆ ನಡೆಸುವುದಿರಲಿ, ಸ್ವೀಕರಿಸಲೂ ಇಲ್ಲ.

**ಸಂಪುಟದ ಮುಂದೆ ಏನಿತ್ತು?:** ಶೈಕ್ಷಣಿಕ ಮತ್ತು ಸಾಮಾಜಿಕ ಸಮೀಕ್ಷೆ ವರದಿಯಲ್ಲಿನ ಕೆಲ ಅಂಶಗಳನ್ನು ರಾಜ್ಯದ ಅಭಿವೃದ್ಧಿ ಸೂಚ್ಯಂಕಕ್ಕೆ ಮಾನದಂಡವಾಗಿ ಬಳಸುವ ಸಂಬಂಧ ಯೋಜನಾ ಇಲಾಖೆ ಪ್ರಸ್ತಾವನೆಯನ್ನು ಸಂಪುಟದ ಮುಂದೆ ಮಂಡಿಸಿತ್ತು.

**ಅವೈಜ್ಞಾನಿಕ:** ಈ ಸಂಬಂಧ ಪ್ರತಿಕ್ರಿಯೆ ನೀಡಿದ ಹಿರಿಯ ಸಚಿವರೊಬ್ಬರು 'ಆ ವರದಿಯೇ ಅವೈಜ್ಞಾನಿಕ. ಹಿಂದಿನ ಸರ್ಕಾರವೇ ವರದಿಯನ್ನು ಸ್ವೀಕರಿಸಲಿಲ್ಲ. ನಾವೇಕೆ ಅದನ್ನು ಸ್ವೀಕರಿಸೋಣ. ಮತ್ತೊಂದಿಷ್ಟು ಗೊಂದಲವಾಗುತ್ತದೆ' ಎಂದು ಅಭಿಪ್ರಾಯಪಟ್ಟರು.

**ಶ್ರೀರಾಮುಲು ಮುನಿಸು:** ಡಿಸಿಎಂ ಪಟ್ಟದ ಮೇಲೆ ಕಣ್ಣಿಟ್ಟಿರುವ ಶ್ರೀರಾಮುಲು ಸಂಪುಟ ಸಭೆಯಿಂದ ದೂರ ಉಳಿದು ಅಸಮಾಧಾನ ಹೊರಹಾಕಿದ್ದಾರೆ. ಸಿಎಂ ಜತೆ ಪಾಲ್ಗೊಳ್ಳಬೇಕಿದ್ದ ಕಾರ್ಯಕ್ರಮದಿಂದಲೂ ದೂರ ಉಳಿಯುವ ಮೂಲಕ ತಮ್ಮ ನಿರೀಕ್ಷೆಯನ್ನು ಪರೋಕ್ಷವಾಗಿ ಮುಂದಿಟ್ಟಿದ್ದಾರೆ. 2018ರ ಚುನಾವಣೆ ವೇಳೆ ತಮ್ಮನ್ನು ಡಿಸಿಎಂ ಮಾಡುವುದಾಗಿ ಪ್ರಚಾರ ಮಾಡಲಾಗಿತ್ತು. ಆದರೆ. ಪ್ರಸ್ತಾಪವೇ ಇಲ್ಲದ ಮೂವರನ್ನು ಡಿಸಿಎಂ ಮಾಡಲಾಗಿದೆ. ಇದೀಗ ಮತ್ತೊಂದು ಡಿಸಿಎಂ ಹುದ್ದೆ ಸೃಷ್ಟಿ ಬಗ್ಗೆಯೂ ಸ್ಪಷ್ಟತೆ ಬರುತ್ತಿಲ್ಲ. ಸಿಎಂ, ವರಿಷ್ಠರು ಸ್ಪಷ್ಟಪಡಿಸಬೇಕೆಂದು ಅಂತರ ಕಾಯ್ದುಕೊಳ್ಳುತ್ತಿದ್ದಾರೆ ಎನ್ನಲಾಗಿದೆ.

# ಜ.20ರಿಂದ ಅಧಿವೇಶನ...

ಮೊದಲನೇ ಪುಟದಿಂದ...

ಹೀಗಾಗಿ 2020ನೇ ಸಾಲಿನ ಮೊದಲ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸುವ ಬಗ್ಗೆ ಚರ್ಚೆ ನಡೆದಿತ್ತು. ರಾಜ್ಯಪಾಲರ ಅನಾರೋಗ್ಯದ ಕಾರಣ ಬೆಂಗಳೂರಲ್ಲೇ ನಡೆಸುವುದು ಸೂಕ್ತ. ಜತೆಗೆ ಫೆಬ್ರವರಿ ಕೊನೇ ವಾರದಲ್ಲಿ ಬಜೆಟ್ ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸುವ ಚರ್ಚೆ ನಡೆಸಿ ತೀರ್ಮಾನ ಮಾಡೋಣ ಎಂದು ಪ್ರಮುಖ ಸಚಿವರೆಲ್ಲ ಅಭಿಪ್ರಾಯಕ್ಕೆ ಬಂದರೆನ್ನಲಾಗಿದೆ.